ಕೊಟ್ಟಿದೆ. ಇದು ಕಾನೂನು ಆದನಂತರ ಕಮರ್ಷಿಯಲ್ ಬ್ಯಾಂಕ್‌ನವರು ರಿಜಸ್ಟ್ರೇಷನ್ ಫೀಜು ಮನ್ನಾ ಮಾಡಿ ರೈತರಿಗೆ ಸಾಲ ಕೊಡುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಟಿ.ಆರ್. ಶಾಮಣ್ಣ.—ರೈತರಿಗೆ ರಿಜಸ್ಟ್ರೇಷನ್ ಫೀಸ್ ಮಾತ್ರ ಮನ್ನಾ ಇದೆಯೇ ಅಥವಾ ಸ್ಟ್ಯಾಂಪ್ ಡ್ಯೂಟಿ ಮಾತ್ರ ಮನ್ನಾ ಇದೆಯೇ ?

ಶ್ರೀ ಎನ್. ಚಿಕ್ಕೇಗೌಡ.—ಸ್ಟ್ಯಾಂಪ್ ಡ್ಯೂಟಿಗೂ ಎಕ್ಸ್‌ಂಪ್ಷನ್ ಇದೆ. ವಿಸ್ತಾರವಾಗಿ ನಾನು ಮೊದಲೇ ಹೇಳಿದ ಹಾಗೇ ಈ ಬಿಲ್ಲಿನಿಂದ ರೈತರಿಗೆ ಪೆಚ್ಚು ಅನುಕೂಲವಾಗುತ್ತದೆಯೇ ಹೊರತು ಅವರಿಗೆ ತೊಂದರೆಯಾಗುವುದಿಲ್ಲ. ಮತ್ತು ಫೈನಾನ್ಸಿಯಲ್ ಇನ್ವೆಸ್ಟ್‌ಮೆಂಟ್ಸ್‌ನವರು ರೈತರಿಗೆ ಏನು ಕಾಲ ಕೆಡಿಸುತ್ತಾರೋ ಅವರು ಕೊಟ್ಟಂಥ ಸಾಲ ಖಚಿತವಾಗಿ ವಾಪಸ್ಸು ಬರಬೇಕು ಎನ್ನುವ ಉದ್ದೇಶದಿಂದ, ಅವರಿಗೆ ಅನುಕೂಲವಾಗುವ ದೃಷ್ಟಿಯಿಂದ ಈ ಮಸೂದೆಯನ್ನು ತಂದಿದ್ದೇವೆ ಇದರಿಂದ ಫೈನಾನ್ಸಿಯಲ್ ಇನ್ಸ್‌ಟ್ಯೂಷನ್ಸ್‌ಗೂ ಕೂಡ ಅನುಕೂಲವಾಗುತ್ತದೆ. ಆ ರೀತಿಯಲ್ಲಿ ಈ ಬಿಲ್ಲಿನಲ್ಲಿ ಅವಕಾಶ ಇದೆ. ಹಾಗೆ ಅವರು ರಿಕವರಿ ಮಾಡುವ ಕಾಲದಲ್ಲಿ ಇದನ್ನು ಲ್ಯಾಂಡ್ ರೆವಿನ್ಯೂ ಆಗಿ ಟ್ರೀಟ್ ಮಾಡಿ ಪರಿಗಣನೆಗೆ ತೆಗೆದುಕೊಳ್ಳಬಹುದು.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) :—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಾದ ಶ್ರೀ ರಂಗನಾಥ್‌ರವರು ತಂದಿರತಕ್ಕ ವಿಧೇಯಕವನ್ನು ವಿರೋಧಿಸುತ್ತಾ ಎರಡು ಮಾತುಗಳನ್ನು ಹೇಳಲ್ಲಿಕ್ಕೆ ಇಲ್ಲಿ ಅಪೇಕ್ಷೆಪಡುತ್ತೇನೆ.

ಈ ಸರಕಾರ ಬಂದ ಮೇಲೆ ಎಲ್ಲದರ ಮೇಲೂ, ನೀರಿಗೂ ಸೇರಿದಂತೆ ಟ್ಯಾಕ್ಸು ಹಾಕುತ ಬರುತ್ತಿದ್ದಾರೆ. ಬಹುಶಃ ಗಾಳಿಗೆ ಇನ್ನೂ ಹಾಕಲಿಲ್ಲ ಮುಂದೆ ನೋಡಬೇಕು ಅದಕ್ಕೂ ಕೂಡ ಹಾಕುತ್ತಾರೋ ಏನೋ? ಈ ರೀತಿ ಪ್ರತಿ ಸಾರಿಯೂ ಹೆಚ್ಚು ಹೆಚ್ಚಾಗಿ ತೆರಿಗೆಗಳನ್ನು ಹಾಕುತ್ತಾ ಹೋಗುವುದಕ್ಕಿಂತ ನನ್ನದು ಒಂದು ಸಲಹೆ ಇದೆ. ಇನ್ನು ಮುಂದೆ ಏನಾದರೂ ಅಧಿಕಾರಿಯವರು ಯಾರೂ ಕಾರುಗಳನ್ನೇ ತೆಗೆದುಕೊಂಡು ಇಟ್ಟುಕೊಳ್ಳಬಾರದು. ಮತ್ತು ಸರಕಾರದವರೇ ಎಲ್ಲ ಕಾರುಗಳನ್ನೂ ಖರೀದಿ ಮಾಡಿ ಅವುಗಳನ್ನು ಜನರಿಗೆ ಟ್ಯಾಕ್ಸಿ ರೂಪದಲ್ಲಿ ಕೊಟ್ಟು ಅದರ ಉಪಯೋಗ ಪಡೆಯುವಂತೆ ಮಾಡಿದರೆ ಆಗ ಖಾಸಗಿ ಕಾರುಗಳೇ ಇಲ್ಲದಂತಾಗಿ ಎಲ್ಲರೂ ಸರಕಾರದ ಬಳಿ ಬಂದು ಕಾರುಗಳನ್ನು ಟ್ಯಾಕ್ಸಿರೂಪದಲ್ಲಿ ಪಡೆದು ಉಪಯೋಗ ಮಾಡಬಹುದು. ರಷ್ಯಾದೇಶದಲ್ಲಿ ಇಂತಹ ಸ್ಥಿತಿ ಇದೆ ಎಂದು ಕೇಳುತ್ತೇವೆ. ಅಂತಹ ಒಂದು ವ್ಯವಸ್ಥೆಯನ್ನೂ ಇಲ್ಲೂ ಮಾಡಬೇಕು ಆಗ ಖಾಸಗಿಯವರು ಯಾರೂ ಕಾರುಗಳನ್ನು ಕೊಳ್ಳಲು ಹೋಗುವುದಿಲ್ಲ. ಇಂತಹ ಒಂದು ಮೂಲಭೂತವಾದ ಬದಲಾವಣೆಯನ್ನು ಮಾಡಲು ನಾನು ಸರಕಾರಕ್ಕೆ ಸಲಹೆ ಮಾಡುತ್ತೇನೆ. ಜನರು ಬಡವರಾಗಿದ್ದರೂ ಒಂದು ಸಾರಿ ಹತ್ತು ರೂಪಾಯಿ ಬಾಡಿಗೆ ಕೊಟ್ಟರೆ ಕಾರು ಸರಕಾರದಲ್ಲಿ ಸಿಗುತ್ತೆ ಎಂದು ಎಲ್ಲರೂ ಉಪಯೋಗ ಮಾಡಿ ಅದರ ಸೌಲಭ್ಯವನ್ನು ಪಡೆಯಬಹುದು. ಈಗ ಹೆಂಚಿನ ಮನೆಯಲ್ಲಿ ಕಾರುಗಳನ್ನು ಇಟ್ಟು ಕಾಪಾಡಬೇಕಾದ ಅವಶ್ಯಕತೆ ಇರುವುದಿಲ್ಲ ಸರಕಾರದವರು ಪ್ರತಿಯೊಂದು ತಾಲ್ಲೂಕು ಹಾಗೂ ಹೋಬಳಿಗಳಲ್ಲಿ ಎರಡೆರಡು ಕಾರುಗಳನ್ನು ಇಟ್ಟು ಅದನ್ನು ಟ್ಯಾಕ್ಸಿ ರೂಪದಲ್ಲಿ ಜನರಿಗೆ ಕೊಟ್ಟರೆ ಇದರಿಂದ ಎಲ್ಲರಿಗೂ ಪ್ರಯೋಜನ ಸಿಗುತ್ತದೆ. ಈ ರೀತಿ ವ್ಯವಸ್ಥೆ ಮಾಡುವುದರಿಂದ ಸಮಾಜದಲ್ಲಿರತಕ್ಕ ಏರುಪೇರುಗಳನ್ನು ಸರಿಮಾಡುವ ಭಾವನೆ ನಮ್ಮ ಸರಕಾರಕ್ಕಿದೆ ಮತ್ತು ಇದನ್ನು ಸುಲಭವಾಗಿ ಸರಿಪಡಿಸಲು ಅನುಕೂಲವಾಗುತ್ತದೆ ಎಂದು ಇಲ್ಲಿ ಹೇಳಲು ಅಪೇಕ್ಷೆಪಡುತ್ತೇನೆ.

ಇದರಲ್ಲಿ ಸ್ಕೂಟರು ಹಾಗೂ ಮೋಟಾರು ಸೈಕಲ್ಲುಗಳ ಮೇಲೆ ತೆರಿಗೆಗಳನ್ನು ಹೆಚ್ಚುಮಾಡಿದ್ದಾರೆ. ಇದನ್ನು ಮಧ್ಯಮ ವರ್ಗದವರು ಉಪಯೋಗ ಮಾಡುವರು. ಇವರಿಗೆ ವರ್ಷ ವರ್ಷವೂ ಮೂರು ರೂಪಾಯಿಗಳಷ್ಟು ತೆರಿಗೆ ಹೆಚ್ಚಿಸುತ್ತಾ ಹೋಗುವುದು ಸರಿಯಲ್ಲ. ನಾವು ಮಾನ್ಯ ಶ್ರೀ ರಂಗನಾಥರವರು ಈ ಇಲಾಖೆಗೆ ಬಂದ ಮೇಲೆ ಏನಾದರೂ ಒಂದು ಮೂಲಭೂತವಾದ ಬದಲಾವಣೆ ಮಾಡುತ್ತಾರೆಂದು ನಿರೀಕ್ಷೆ ಮಾಡುತ್ತಿದ್ದೇವೆ. ಅದರಂತೆ ಮಾಡಲಿ ಎಂದು ನನ್ನ ಅಪೇಕ್ಷೆ. ಆ ರೀತಿಯಾದ ಒಂದು ಕಾರ್ಯಕ್ರಮವನ್ನು ತಾವು ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†SRI K.H RANGANATH :—Madam Speaker, I have taken note of the views expressed by hon. Members and particularly hon. Member Mr. Shamanna who mentioned about the difficulties faced by tax-payers at the Regional Transport Office and also the grants given to

(SRI K. H. RANGANATH)

the Corporation in lieu of the taxes collected. I have already replied on the demands that the Government is going to rationalise the grants I am thankful to the hon. Members that except the policy of raising the tax they have not opposed the rates now fixed. With these observations I request the hon. Members to give their consent to the proposed Amending Bill.

MADAM SPEAKER :—I will now put the motion to the vote of the House. The question is: "That the Karnataka Motor Vehicles Taxation (Amenment) Bill, 1974 be taken into consideration."

The motion was adopted

Clause 2

MADAM SPEAKER :—I will now put the clauses to the vote of the House; The question is :

" That clause to do stand part of the Bill."

The motion was adopted

Clause 2 was added to the Bill

Clause 1 etc,

MADAM SPEAKER :—The question is :

"That clause 1 the long title the preamble and the Enacting Formula do stand part of the Bill.".

The motion was adopted

Clause 1, the long Title, the Preamble and the Enacting Formula were added to the Bill.

Motion to Pass

SRI K H. RANGANATH :—I move.

"That the Karnataka Motor Vehicles Taxation (Amendment) Bill, Bill, 1974 be passed."

MADAM SPEAKER :—The question is.

"That the Karnataka Motor Vehicles Taxation (Amdnement) Bill, 1974 be passed."

The motion was adopted and the Bill was passed